# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಸಕಲೇಶಪುರ

# C .C.No. 1321/2022

**ಹೆಸರುಃ** ನಿಖಿಲ್ **DW-1**
**ತಂದೆ/ಗಂಡ ಹೆಸರುಃ** ಪರಮೇಶ್
**ವಯಸ್ಸುಃ** 39 ವರ್ಷ
**ವೃತ್ತಿಃ** ವ್ಯವಸಾಯ
**ವಿಳಾಸಃ** ದೊಡ್ಡಕೊಳತೂರು, ಶನಿವಾರಸಂತೆ **ದಿನಾಂಕಃ**17-11-2025

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ ವೈ.ಕೆ ವಕೀಲರಿಂದ**

ನನಗೆ ದೂರುದಾರರು ಪರಿಚಯ ಇರುತ್ತಾರೆ. ದೂರುದಾರರು ವಿನಾಯಕ ಬಾರ್ ವೈನ್ಸ್ ಶಾಪ್ ನ್ನು ಶನಿವಾರಸಂತೆಯಲ್ಲಿ 2019 ರಲ್ಲಿ ಲೀಸ್ ಗೆ ಪಡದಿದ್ದರು. ನಾನು ಅಲ್ಲಿ ಕ್ಯಾಷಿಯರ್ ಆಗಿ ಕೆಲಸ ಮಾಡುತ್ತಿದ್ದೆ. ನಾನು 2019 ರಲ್ಲಿ 6 ತಿಂಗಳ ಕಾಲ ಕೆಲಸ ಮಾಡಿರುತ್ತೇನೆ. ನನಗೆ ಡೆಂಗ್ಯು ಜ್ವರ್ ಇದ್ದುದರಿಂದ ನಾನು ಕೆಲಸಕ್ಕೆ ಹೋಗಲು ಆಗಲಿಲ್ಲ. ಆಗ ದೂರುದಾರರು ನನ್ನ ಜಾಗಕ್ಕೆ ಬೇರೆಯವರನ್ನು ಕರೆದುಕೊಂಡು ಬಂದಿರುತ್ತಾರೆ. ನನ್ನ ಜೊತೆ ಚಿಕ್ಕಕೊಳತೂರಿನ ಶರತ್ ಎಂಬುವರು ಸಹ ಕ್ಯಾಷಿಯರ್ ಆಗಿ ಕೆಲಸಕ್ಕೆ ಸೇರಿದರು. ಈಗಲು ಅವರು ಅಲ್ಲಿಯೇ ಕೆಲಸ ಮಾಡುತ್ತಿದ್ದಾರೆ.

ಸದರಿ ವೈನ್ ಶಾಪ್ ನ ಮಾಲಿಕರು ಅತ್ತಿಹಳ್ಳಿಯ ಪರಮೇಶ್ ಎಂಬವರು ಇರುತ್ತಾರೆ. ನಾನು ದೂರುದಾರರ ಬಳಿ ಮಾಸಿಕ ರೂ.8,000/-ಕ್ಕೆ ಕೆಲಸಕ್ಕೆ ಸೇರಿರುತ್ತೇನೆ. ಆ ಸಮಯದಲ್ಲಿ ಭದ್ರತೆಗಾಗಿ ನನ್ನ ಬಳಿ ಬ್ಯಾಂಕ್ ಆಫ್ ಬರೋಡ, ನಗರೂರು, ಸೋಮವಾರಪೇಟೆ ಶಾಖೆಯ ಚೆಕ್ ತೆಗೆದುಕೊಂಡಿರುತ್ತಾರೆ. ನಾನು ಕ್ಯಾಷಿಯರ್ ಆಗಿ ಕೆಲಸ ಮಾಡುತ್ತಿದ್ದರಿಂದ ನನ್ನ ಬಳಿ ಸಹಿ ಮಾಡಿದ ಒಂದು ಖಾಲಿ ಚೆಕ್ ನ್ನು ಪಡೆದುಕೊಂಡಿರುತ್ತಾರೆ. ಶರತ್ ರವರ ಬಳಿ ಸಹ ಚೆಕ್ ನ್ನು ಪಡೆದಿರುತ್ತಾರೆ. ನಾನು ಪುನಃ ಕೆಲಸಕ್ಕೆ ಹೋದಾಗ ನನ್ನ ಜಾಗದಲ್ಲಿ ಬೇರೆಯವರು ಸೇರಿಕೊಂಡಾಗ ನನ್ನ ಚೆಕ್ ನು ವಾಪಸ್ ಕೊಡುವಂತೆ ಕೇಳಿರುತ್ತೇನೆ. ಆಗ ದೂರುದಾರರು ಚೆಕ್ ಮನೆಯಲ್ಲಿದ್ದು ಪುನಃ ಕೊಡುತ್ತೇನೆ ಎಂದು ತಿಳಿಸಿದರು. ಆದರೆ ಚೆಕ್ ನೀಡಿರುವುದಿಲ್ಲ. ಆ ಮೇಲೆ ಶನಿವಾರಸಂತೆ ಠಾಣೆಯಲ್ಲಿ ನನ್ನ ವಿರುದ್ದ ರೂ.2,15,000/- ಹಣವನ್ನು ವ್ಯಪಾರದಿಂದ ಬಂದ ಹಣವನ್ನು ತೆಗೆದುಕೊಂಡು ಹೋಗಿರುತ್ತೇನೆಂದು ದೂರು ನೀಡಿರುತ್ತಾರೆ. ಠಾಣೆಯಲ್ಲಿ ನಾನು ಹೋದಾಗ, ಪೋಲಿಸರು ದೂರುದಾರರಿಗೆ ಕರೆ ಮಾಡಿದರೂ ಸಹ ಅವರು ಬಂದಿರುವುದಿಲ್ಲ. ನನ್ನ ವಿರುದ್ದ ಪ್ರಕರಣ ದಾಖಲು ಮಾಡಿಲ್ಲ. ಆ ನಂತರ ನ್ಯಾಯಾಲಯದಿಂದ ನನಗೆ ಸಮನ್ಸ ಬಂದಿರುತ್ತದೆ. ದೂರುದಾರರು ನನಗೆ ತಿಳುವಳಿಕೆ ನೋಟಿಸ್ ನೀಡಿರುತ್ತಾರೆ.

ಷಿಯು ಅಮಾನತ್ತು ಪಂಚನಾಮೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 6 ಎಂದು ಸಹಿಯನ್ನು 6(ಎ) ಎಂದು ಗುರುತಿಸಲಾಯಿತು. 4 ವರ್ಷಗಳ ಹಿಂದೆ ಜಮೀನು ವಿವಾದ ಸಂಬಂಧ ನಾನು ಠಾಣೆಗೆ ಬಂದಾಗ ಪೋಲಿಸರು ಖಾಲಿ ಹಾಳೆ ಮೇಲೆ ನನ್ನ ಸಹಿ ಪಡೆದಿರುತ್ತಾರೆ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ, ಯವುದೇ ವಸ್ತುಗಳನ್ನು ಜಪ್ತು ಪಡಿಸಿಲ್ಲ. ನಿ.ಪಿ. 6 ರಲ್ಲಿರುವ ಮಾಹಿತಿಗಳು ನನಗೆ ಗೊತ್ತಿಲ್ಲ.

***(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ ಸ ಅ ಅವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)***

**ಪಾಟೀ ಸವಾಲುಃ ಮಾನ್ಯ ಎ ಪಿ ಪಿ ಯವರಿಂದ.**

ದಿನಾಂಕಃ 20.01.2018 ರಲ್ಲಿ ಮಧ್ಯಹ್ನ 2-3 ಗಂಟೆ ಸಮಯದಲ್ಲಿ ಪೋಲಿಸರು ಗ್ರಾಮಾಂತರ ಪೋಲಿಸ್ ಠಾಣೆಯ ಮುಂಭಾಗ ನನ್ನ ಸಮಕ್ಷಮ ನಿ.ಪಿ.-6 ರಂತೆ ಪಂಚನಾಮೆ ಮಾಡಿ ಕೆಎ-18-ಡಬ್ಲ್ಯೂ-1134 ವಾಹನವನ್ನು ಜಪ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪಂಚನಾಮೆ ಮಾಡಿದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-
ಪ್ರಧಾನ **ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**

## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಸಕಲೇಶಪುರ

## C .C.No. /

| | | |
|---|---|---|
| **ಹೆಸರುಃ** | **ಶ್ರೀಕಾಂತ @ ಕಾಂತರಾಜು** | |
| **ತಂದೆ/ಗಂಡ ಹೆಸರುಃ** | **ದೊಡ್ಡೇಗೌಡ ಹೆಚ್ ಆರ್** | **PW-1** |
| **ವಯಸ್ಸುಃ** | **33 ವರ್ಷ** | |
| **ವೃತ್ತಿಃ** | **ರೈಲ್ವೆ ಇಲಾಖೆ ನೌಕರರು** | |
| **ವಿಳಾಸಃ** | **ಹಾಸನ** | **ದಿನಾಂಕಃ 02-06-2025** |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ಯವರಿಂದ.**

ನಾನು ಆರೋಪಿಯ ವಿರುದ್ಧ ಈ ಪಿರ್ಯಾದಿ ದಾಖಲಿಸಿರುತ್ತೇನೆ. ನನಗೆ ಆರೋಪಿ ಹಲವಾರು ವರ್ಷಗಳಿಂದ ಪರಿಚಯವಿರುತ್ತಾರೆ. ದಿಃ 01-01-2012 ರಂದು ಆರೋಪಿ ನನ್ನ ಬಳಿ ಹಣ ಸಹಾಯ ಕೇಳಿದ್ದರು. ಆಗ ನಾನು ಆತನಿಗೆ 4 ಲಕ್ಷ ರೂ. ಹಣವನ್ನು ಸಾಲವಾಗಿ ಕೊಟ್ಟಿದ್ದೆನು. ನನ್ನಿಂದ ಹಣ ಪಡೆಯುವ ಕಾಲಕ್ಕೆ ಆರೋಪಿಯು ಭದ್ರತೆಗಾಗಿ ಕಾರ್ಪೊರೇಷನ್ ಬ್ಯಾಂಕ್ ಬನವಾಸೆ ಶಾಖೆಗೆ ಸೇರಿದ ಒಂದು ಚೆಕ್ಕನ್ನು ರೂ. 4,00,000/- ಎಂದು ನಮೂದಿಸಿ , ಬರೆದುಕೊಟ್ಟಿದ್ದರು. ಚೆಕ್ಕಿನಲ್ಲಿ ಆರೋಪಿ ದಿಃ 01-02-2013 ರ ದಿನಾಂಕವನ್ನು ನಮೂದಿಸಿ ಕೊಟ್ಟಿದ್ದರು. ನಾನು ಸದರಿ ಚೆಕ್ಕನ್ನು ನಗದೀಕರಣಕ್ಕಾಗಿ ಕಾರ್ಪೊರೇಷನ್ ಬ್ಯಾಂಕ್ ಸಕಲೇಶಪುರ ಶಾಖೆಯಲ್ಲಿ ಸಲ್ಲಿಸಿರುತ್ತೇನೆ. ಸದರಿ ಚೆಕ್ ಅಮಾನ್ಯಗೊಂಡು No such account ಎಂದು ಹಿಂದಿರುಗಿ ಬಂದಿರುತ್ತದೆ. ನಂತರ ನಾನು ನನ್ನ ವಕೀಲರ ಮುಖಾಂತರ ಆರೋಪಿಗೆ ನೋಟೀಸ್ ಕೊಟ್ಟಿರುತ್ತೇನೆ. ನೋಟೀಸ್ ಜಾರಿಯಾದರೂ ಆರೋಪಿ ಮರುಉತ್ತರ ಕೊಟ್ಟಿರುವುದಿಲ್ಲ. ಆರೋಪಿ ನೋಟೀಸ್ ಜಾರಿಯಾದ ನಂತರ ನನಗೆ ಯಾವುದೇ ಹಣ ಕೊಟ್ಟಿರುವುದಿಲ್ಲ. ಪೊಲೀಸರು ನ್ಯಾಯಾಲಯಕ್ಕೆ ಯಾವುದೇ ವರದಿ ಕೊಟ್ಟಿರುವುದಿಲ್ಲ ಮತ್ತು ನಾನು ಸದರಿ ವರದಿಗೆ ಯಾವುದೇ ತಕರಾರು ಸಲ್ಲಿಸಿರುವುದಿಲ್ಲ , ಆರೋಪಿ ತಕರಾರು ಸಲ್ಲಿಸಿರುತ್ತಾರೆ. ಆರೋಪಿ ನನಗೆ ಮೋಸ ಮಾಡಿರುತ್ತಾರೆ. ಸಾಕ್ಷಿದಾರರು ಚೆಕ್ಕನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 1 ಎಂದು ಗುರುತಿಸಲಾಯಿತು. ಬ್ಯಾಂಕ್ ಹಿಂಬರಹವನ್ನು ನಿ.ಪಿ. 2 ಎಂದು , ನೋಟೀಸನ್ನು ನಿ.ಪಿ. 3 ಎಂದು , ಅಂಚೆ ರಶೀದಿಯನ್ನು ನಿ.ಪಿ. 4 ಎಂದು , ಅಂಚೆ ಸ್ವೀಕೃತಿಯನ್ನು ನಿ.ಪಿ. 5 ಎಂದು ಗುರುತಿಸಲಾಯಿತು. ನನಗೆ ಆರೋಪಿಯಿಂದ ಮೋಸ ಆಗಿರುವುದರಿಂದ ನಾನು ನ್ಯಾಯಾಲಯದಲ್ಲಿ ನ್ಯಾಯ ಕೋರುತ್ತೇನೆ.

**ಮರು ವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೆ ಕೇ ಸ ಇ

**ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**